# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** ದಿನಾಂಕ: 21.12.2010

## ***ಗ್ರೌಂಡ್ ರೆಂಟ್ ಸಂಗ್ರಹಣೆಗೆ ಒತ್ತು : ಪಾಲಿಕೆಯ ಆಯುಕ್ತರು***

ಸಾರ್ವಜನಿಕರು ಕಟ್ಟಡಗಳನ್ನು ನಿರ್ಮಿಸಲು ಮಂಜೂರಾದ ನಕ್ಷೆಗೆ ಅನುಗುಣವಾಗಿ ರಸ್ತೆ ಮೇಲೆ ಕಟ್ಟಡದ ಸಾಮಗ್ರಿಗಳನ್ನು ಸಂಗ್ರಹಿಸಿಡಲು 6 ತಿಂಗಳಿಗೆ ಅನ್ವಯಿಸುವಂತೆ ಗ್ರೌಂಡ್ ರೆಂಟ್ ಸಂಗ್ರಹಿಸಲಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ನಿಗಧಿಪಡಿಸಿದ ಅವಧಿಗಿಂತ ಹೆಚ್ಚಿನ ಅವಧಿಯವರೆಗೆ ಕಟ್ಟಡ ಸಾಮಗ್ರಿಗಳನ್ನು ರಸ್ತೆ ಮೇಲೆ ಸಂಗ್ರಹಿಸಿದ್ದರೂ ಕೂಡಾ ಅದಕ್ಕೆ ಹೆಚ್ಚಿನ ಗ್ರೌಂಡ್ ರೆಂಟ್ ಪಾವತಿಸಿರುವುದಿಲ್ಲ. ಇಂತಹ ಪ್ರಕರಣಗಳನ್ನು ಪತ್ತೆ ಹಚ್ಚಿ ಅವರಿಂದ ಗ್ರೌಂಡ್ ರೆಂಟ್ ವಸೂಲಿ ಮಾಡಲು ಪಾಲಿಕೆಯ ಆಯುಕ್ತರು ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ.

ಪಾಲಿಕೆ ಆಯುಕ್ತರು ಇಂದು ಬೊಮ್ಮನಹಳ್ಳಿ ವಲಯದಲ್ಲಿ ಪ್ರಗತಿ ಪರಿಶೀಲನೆ ನಡೆಸಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರುಗಳು ತಮ್ಮ ವಿಭಾಗದಲ್ಲಿ ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ಕಟ್ಟಡಗಳ ಮೇಲೆ ನಿಗಾ ಇಟ್ಟು, ಕಟ್ಟಡದ ಸಾಮಗ್ರಿಗಳನ್ನು ರಸ್ತೆ ಮೇಲೆ ನಿಗಧಿಪಡಿಸಿದ ಅವಧಿಗಿಂತಲೂ ಹೆಚ್ಚಿನ ಅವಧಿಯವರೆಗೆ ಸಾಮಗ್ರಿಗಳನ್ನು ಸಂಗ್ರಹಿಸಿದ್ದರೆ ಹಾಗೂ ಅನುಮೋದಿತ ನಕ್ಷೆಗಿಂತ ಹೆಚ್ಚುವರಿಯಾಗಿ ಕಟ್ಟಡ ನಿರ್ಮಾಣ ಕೈಗೊಂಡಿದ್ದಲ್ಲಿ ಅಂತಹವುಗಳನ್ನು ಗುರುತಿಸಿ, ಅವರಿಂದ ಹೆಚ್ಚಿನ ಗ್ರೌಂಡ್ ರೆಂಟ್ ವಸೂಲಿ ಮಾಡಲು ಸೂಚಿಸಿದರು.

ಇದುವರೆಗೂ ಎಲ್ಲಾ ವಲಯಗಳಲ್ಲಿ ಹಲವಾರು ಕಟ್ಟಡಗಳು ನಿರ್ಮಾಣಗೊಳ್ಳುತ್ತಿದ್ದು, ಕಟ್ಟಡದ ಸಾಮಗ್ರಿಗಳನ್ನು ನಿಗಧಿಪಡಿಸಿದ ಅವಧಿಗಿಂತ ಹೆಚ್ಚಿನ ಅವಧಿಯವರೆಗೆ ಸಾಮಗ್ರಿಗಳನ್ನು ಸಂಗ್ರಹಿಸಿದ್ದರೂ ಕೂಡಾ ಸಂಬಂದಪಟ್ಟ ಅಭಿಯಂತರರು ಗಮನಹರಿಸದೇ ಇರುವುದು ಕಂಡುಬಂದಿರುತ್ತದೆ. ಇದರಿಂದ ಸಾಕಷ್ಟು ಪ್ರಮಾಣದಲ್ಲಿ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಇನ್ನುಮುಂದೆ ಅಧಿಕಾರಿಗಳು ಈ ಬಗ್ಗೆ ಸೂಕ್ತ ಗಮನಹರಿಸಿ, ಗ್ರೌಂಡ್ ರೆಂಟ್ ವಸೂಲಾತಿಗೆ ಕ್ರಮ ಜರುಗಿಸಲು ಸೂಚಿಸಿದರು. ಈ ವಿಷಯದಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿಸಿದ್ದಲ್ಲಿ ಅಂತಹವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದೆಂದು ತಿಳಿಸಿದರು.

***ರಸ್ತೆ ಅಗೆತ:*** ಹೊಸ ವಲಯಗಳಲ್ಲಿ ನಾಗರಿಕ ಸೌಲಭ್ಯಗಳನ್ನು ಪಡೆಯಲು ಅನುಮತಿ ಇಲ್ಲದೆ ರಸ್ತೆ ಅಗೆಯುತ್ತಿರುವುದು ಮತ್ತು ಅನುಮತಿ ಪಡೆದ ಅಳತೆಗಿಂತಲೂ ಹೆಚ್ಚಿಗೆ ರಸ್ತೆ ಅಗೆಯುತ್ತಿರುವ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿವೆ. ಆದ್ದರಿಂದ ವಿಭಾಗ ಮಟ್ಟದ ಅಭಿಯಂತರರುಗಳು ಜಾಗರೂಕರಾಗಿ ಇಂತಹ ಪ್ರಕರಣಗಳು ಕಂಡುಬಂದಲ್ಲಿ ಆಸ್ತಿ ಮಾಲೀಕರ ಮೇಲೆ ದಂಡ ವಿಧಿಸಿ, ಶುಲ್ಕವನ್ನು ವಸೂಲಿ ಮಾಡಲು ಕಟ್ಟುನಿಟ್ಟಿನ ಕ್ರಮ ಜರುಗಿಸುವಂತೆ ತಿಳಿಸಿದರು.

. . . 2

***ಆಸ್ತಿ ತೆರಿಗೆ ಸಂಗ್ರಹಣೆ:*** ಬೊಮ್ಮನಹಳ್ಳಿ ವಲಯದಲ್ಲಿ 1 ಲಕ್ಷ 82 ಸಾವಿರ ಆಸ್ತಿಗಳಿವೆ ಎಂದು ಅಂದಾಜಿಸಲಾಗಿದ್ದು, ಅವುಗಳಲ್ಲಿ 1 ಲಕ್ಷ 78 ಸಾವಿರ ಆಸ್ತಿಗಳ ಸರ್ವೇ ಕಾರ್ಯ ಪೂರ್ಣಗೊಂಡಿರುತ್ತದೆ. ಡಿಸೆಂಬರ್ 31ರ ಒಳಗಾಗಿ ಈ ವಲಯದಲ್ಲಿ ಬರುವ ಎಲ್ಲಾ ಆಸ್ತಿಗಳ ಸರ್ವೇ ಕಾರ್ಯ ಪೂರ್ಣಗೊಳಿಸಲಾಗುವುದು. ಈ ವಲಯದಲ್ಲಿ ರೂ.195.00 ಕೋಟಿ ಆಸ್ತಿ ತೆರಿಗೆ ಸಂಗ್ರಹಣೆಗೆ ಗುರಿ ಹೊಂದಿದ್ದು, ಈಗಾಗಲೇ ರೂ.80.00 ಕೋಟಿ ರೂ.ಗಳಷ್ಟು ಆಸ್ತಿ ತೆರಿಗೆ ಸಂಗ್ರಹಣೆಯಾಗಿರುತ್ತದೆ. ಆಸ್ತಿ ತೆರಿಗೆ ಘೋಷಣೆ ಮಾಡುವಲ್ಲಿ ತಪ್ಪು ಮಾಹಿತಿ ನೀಡಿದವರಿಗೆ ಜನವರಿ ಮೊದಲನೇ ವಾರದಲ್ಲಿ ವಿಶೇಷ ನೋಟಿಸ್‌ಗಳನ್ನು ಜಾರಿ ಮಾಡಿ, ಆಸ್ತಿ ತೆರಿಗೆ ಸಂಗ್ರಹಣೆಗೆ ಹೆಚ್ಚಿನ ಒತ್ತು ನೀಡಲಾಗುವುದೆಂದು ಆಯುಕ್ತರು ತಿಳಿಸಿದ್ದಾರೆ.

***ಮಳೆ ನೀರಿನ ಸಂಗ್ರಹಣೆ:*** ಈ ವಲಯದಲ್ಲಿ 59 ಉದ್ಯಾನವನಗಳಿದ್ದು, ಅದರಲ್ಲಿ 17 ಉದ್ಯಾನವನಗಳಲ್ಲಿ ಮಳೆ ನೀರಿನ ಸಂಗ್ರಹಣೆ ಯೋಜನೆ ಪೂರ್ಣಗೊಂಡಿದ್ದು, ಮಾರ್ಚ್ 31ರ ಒಳಗಾಗಿ ಎಲ್ಲಾ ಉದ್ಯಾನವನಗಳಲ್ಲಿ ಮಳೆ ನೀರಿನ ಸಂಗ್ರಹಣೆ ಮತ್ತು ಸಾವಯುವ ಗೊಬ್ಬರ ತಯಾರಿಸುವ ಘಟಕಗಳನ್ನು ಸ್ಥಾಪಿಸಲು ಆಯುಕ್ತರು ಸೂಚನೆ ನೀಡಿದರು.

ಶೇಕಡ 22.75 ಯೋಜನೆಯ ಅಡಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ 450 ಮನೆಗಳನ್ನು ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗಿದ್ದು, ಅದರಲ್ಲಿ 72 ಮನೆಗಳ ನಿರ್ಮಾಣ ಪೂರ್ಣಗೊಂಡಿರುತ್ತದೆ. 168 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ. ಈ ಯೋಜನೆಯ ಅಡಿ ಪಾಲಿಕೆಯಲ್ಲಿ ಸಾಕಷ್ಟು ಹಣ ಇರುವುದರಿಂದ ನಗರದ ಬಡವರಿಗಾಗಿ ಇನ್ನೂ ಹೆಚ್ಚಿನ ಮನೆಗಳನ್ನು ನಿರ್ಮಿಸುವಂತೆ ಕ್ರಮ ಕೈಗೊಳ್ಳಲು ಜಂಟಿ ಆಯುಕ್ತರಿಗೆ ತಿಳಿಸಿದರು.

ಪಾಲಿಕೆಯ ಇಂಜೀನಿಯರಿಂಗ್ ವಿಭಾಗದವರು ಮತ್ತು ಕಂದಾಯ ಇಲಾಖೆಯವರು ಜಂಟಿಯಾಗಿ ಪಾಲಿಕೆಯನ್ನು ಆರ್ಥಿಕವಾಗಿ ಸದೃಢವನ್ನಾಗಿ ಮಾಡಲು ಕೆ.ಎಂ.ಸಿ. ಕಾಯ್ದೆಯ ಅಡಿಯಲ್ಲಿ ಎಲ್ಲಾ ಆದಾಯದ ಮೂಲಗಳಿಂದ ಬರಬೇಕಾದಂತಹ ತೆರಿಗೆ / ಶುಲ್ಕಗಳನ್ನು ಸಂಗ್ರಹಿಸಲು ಪ್ರಯತ್ನಿಸಬೇಕು ಎಂದು ಪಾಲಿಕೆ ಆಯುಕ್ತರು ಅಧಿಕಾರಿಗಳಿಗೆ ತಿಳಿಸಿದರು. ಬೊಮ್ಮನಹಳ್ಳಿ ಒಂದು ಮಾದರಿ ವಲಯವನ್ನಾಗಿ ಪರಿವರ್ತಿಸಲು ಶ್ರಮಿಸಬೇಕೆಂದು ತಿಳಿಸಿದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 21.12.2010**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ 8 ವಲಯಗಳಲ್ಲೂ ಉದ್ದಿಮೆ ಪರವಾನಿಗೆಗಳ ನೀಡಿಕೆ ಪ್ರಕ್ರಿಯೆಯನ್ನು ತೀವ್ರತರವಾಗಿ ಹಮ್ಮಿಕೊಳ್ಳಲು ದಿನಾಂಕ: 11.10.2010 ರಿಂದ ಒಂದು ತಿಂಗಳವರೆಗೆ ಉಪ ಆಯುಕ್ತರು (ಆರೋಗ್ಯ) ರವರ ಕಛೇರಿ ಆದೇಶ ಸಂಖ್ಯೆ: ಉ.ಆ(ಹೆಚ್)/ಪಿಆರ್/813/10-11, ದಿನಾಂಕ: 28.07.2010 ಹಾಗೂ 05.10.2010ರ ಆದೇಶದ ರೀತ್ಯಾ ಪಾಲಿಕೆ ವ್ಯಾಪ್ತಿಯ 5 ಲಕ್ಷದಷ್ಟು ಉದ್ದಿಮೆಗಳಿಗಾದರೂ ಪರವಾನಿಗೆಯನ್ನು ನೀಡಲು ಸೂಚನೆ ನೀಡಲಾಗಿತ್ತು. ಮುಂದುವರೆದಂತೆ ಅದರ ಪ್ರಗತಿಯು ನಿರೀಕ್ಷಿತ ಮಟ್ಟದಲ್ಲಿ ಆಗಿರುವುದಿಲ್ಲವಾದ ಕಾರಣ ಪರವಾನಿಗೆ ನೀಡುವ ಆಂದೋಲನವನ್ನು ಮುಂದುವರೆಸಲು ಹಾಗೂ ಉದ್ದಿಮೆದಾರರು ಪರವಾನಿಗೆ ಶುಲ್ಕ ಪಾವತಿಸಿ ಉದ್ದಿಮೆ ಪರವಾನಿಗೆಯನ್ನು ಸುಲಭವಾಗಿ ಪಡೆಯಲು ವ್ಯಾಪಕವಾಗಿ ಮತ್ತು ಕರಾರುವಕ್ಕಾಗಿ ಈ ಕೆಳಕಂಡಂತೆ ಅನುಷ್ಠಾನಗೊಳಿಸಲು ಸೂಚಿಸಿದೆ.

- ಉದ್ದಿಮೆ ಪರವಾನಿಗೆ ಆಂದೋಲನವನ್ನು ದಿನಾಂಕ: 11.10.2010 ರಿಂದ ಒಂದು ತಿಂಗಳವರೆಗೆ ನಡೆಸಲು ಸೂಚಿಸಲಾಗಿದ್ದು, ಈ ಕಾರ್ಯಕ್ರಮವನ್ನು, ದಿನಾಂಕ: 31.01.2011ರ ವರೆಗೆ ಹಮ್ಮಿಕೊಳ್ಳುವುದು.
- ಉದ್ದಿಮೆದಾರರು, ಉದ್ದಿಮೆ ಪರವಾನಿಗೆಗಳನ್ನು ಸುಲಭವಾಗಿ ಪಡೆಯಲು ಅನುಕೂಲವಾಗುವಂತೆ ಪಾಲಿಕೆಯ ಕೇಂದ್ರ ಕಛೇರಿಯ ಗಾಜಿನ ಮನೆಯಲ್ಲಿ ಕೌಂಟರ್ ತೆರೆಯುವುದು, ಈ ಕ್ರಿಯೆಗೆ ಬೇಕಾದ ಕಂಪ್ಯೂಟರ್ ಉಪಕರಣಗಳು ಆಪರೇಟರ್‌ಗಳು/ ಕಛೇರಿ ಸಿಬ್ಬಂದಿಗಳನ್ನು, ನಿಯೋಜಿಸಿಕೊಂಡು ಸ್ಥಳದಲ್ಲಿಯೇ ಉದ್ದಿಮೆ ಪರವಾನಿಗೆ ನೀಡಲು, ಉಪ ಆರೋಗ್ಯಾಧಿಕಾರಿ (ದಕ್ಷಿಣ) ರವರನ್ನು ಮತ್ತು ಡಾ|| ರಮೇಶ್, ಸಹಾಯಕ ನಿರ್ದೇಶಕರು (ಪಶುಪಾಲನೆ), (ಮಾಂಸ ಮಾರಾಟ ಉದ್ದಿಮೆಗಳಿಗೆ ಪರವಾನಿಗೆ ನೀಡಲು) ರವರನ್ನು ನಿಯೋಜಿಸುವುದು. ಹಾಗೂ ಎಲ್ಲಾ ಆರೋಗ್ಯ ವೈದ್ಯಾಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು (ಪಶುಪಾಲನೆ) ರವರುಗಳು ಉದ್ದಿಮೆ ಪರವಾನಿಗೆಗಳನ್ನು ಉದ್ದಿಮೆ ಸ್ಥಳದಲ್ಲಿಯೇ ನೀಡುವುದು.

ಉಪ ಆಯುಕ್ತರು (ಆರೋಗ್ಯ) ರವರ ಕಛೇರಿ ಆದೇಶ ಸಂಖ್ಯೆ: ಉ.ಆ(ಹೆಚ್)/ಪಿಆರ್/813/10-11, ದಿನಾಂಕ: 28.07.2010 ಹಾಗೂ 05.10.2010ರ ಆದೇಶದ ಮೇರೆಗೆ ಈಗಾಗಲೇ ನೀಡಲಾದ ಸೂಚನೆಗಳನ್ನು ಮುಂದುವರೆಸಲಾಗಿದ್ದು, ಸಂಬಂಧಪಟ್ಟ ವಲಯ ಅಪರ/ಜಂಟಿ ಆಯುಕ್ತರುಗಳು, ಆರೋಗ್ಯಾಧಿಕಾರಿಗಳು ಈ ಕಾರ್ಯಕ್ರಮವನ್ನು ತೀವ್ರತರದಲ್ಲಿ ಅನುಷ್ಠಾನಗೊಳಿಸಿ ಯಶಸ್ವಿಯಾಗಿ ನಿರ್ವಹಿಸಲು ಪಾಲಿಕೆಯ ಆಯುಕ್ತರು ಆದೇಶ ನೀಡಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**